ದಿನಾಂಕಃ 15-09-2023 ರಂದು ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ವೈ ಡಿ ಎಸ್ ವಕೀಲರಿಂದಃ**

ಈ ದಾವೆಯನ್ನು ನಾನು ಯಾವ ಪರಿಹಾರ ಕೇಳಿ ಹಾಕಿದ್ದೆನೆ ಎಂದರೆ ಪ್ರತಿವಾದಿಗಳು ನಮಗೆ ತೊಂದರೆಕೊಟ್ಟಿದ್ದರಿಂದ ಈ ದಾವೆ ಹೂಡಿದ್ದೆನೆ. ಸದರಿ ದಾವೆಯನ್ನು ನಾನು ಕುಬೋಂದ್ರೊಜಿರವರ ಹೂಡಿದ್ದೆನೆ. ಪ್ರತಿವಾದಿಗಳು ಯಾವುದೇ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಗೆ ಪ್ರತಿವಾದಿಗಳೇ ಮಾಲೀಕರಾಗಿದ್ದು ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತೊಂದರೆಕೊಟ್ಟಿದ್ದರ ಕುರಿತು ಪೊಲೀಸ್ ಠಾಣೆಗೆ ದೂರನ್ನು ದಾಖಲಿಸಲು ನನಗೇನು ತೊಂದರೆಯಿರಲಿಲ್ಲ ಎಂದರೆ ನಾನು ನ್ಯಾಯಾಲಯಕ್ಕೆ ಬಂದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾನು ಈ ದಾವೆ ಹೂಡುವ ಮುನ್ನ ಪೊಲೀಸ್ ಠಾಣೆಗೆ ದೂರನ್ನು ದಾಖಲಿಸಿದ್ದೆನೆ ಎಂದು ನುಡಿಯುತ್ತಾರೆ. ಸದರಿ ದೂರನ್ನು 2017 ರ ಜೂನ್ ಜುಲೈ ತಿಂಗಳ ದಾಖಲಿಸಿರುತ್ತೇನೆ. ನಿರ್ದಿಷ್ಟ ದಿನಾಂಕ ನನಗೆ ಹೇಳಲಾಗುವುದಿಲ್ಲ. ಈ ದಾವೆಗೆ ಸಂಬಂಧಪಟ್ಟ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇದೆ.

ದಿಃ04-08-1986 ರಲ್ಲಿ ದಾವಾಸ್ತಿಯನ್ನು ಶ್ರೀಮತಿ ಲಕ್ಷ್ಮಿ ಕೋಂ ಕೃಷ್ಣಅಯ್ಯಂಗರ್ ರವರ ಮಗನಾದ ಬಿ ಕೆ ಎಸ್ ಕೇಸರಿಯವರಿಂದ ಖರೀದಿ ಮಾಡಿರುತ್ತೇನೆ. ನಾನು ದಾವಾಸ್ತಿಯನ್ನು ಕ್ರಯಕ್ಕೆ ಖರೀದಿಸುವ ಮುನ್ನ ದಾವಾಸ್ತಿಯ ಖಾತೆ ಲಕ್ಷ್ಮಿ ಮತ್ತು ಅವರ ಮಗ ಬಿ ಕೆ ಎಸ್ ಕೇಸರಿಯವರ ಹೆಸರಿನಲ್ಲಿತ್ತು. ಬಿ ಕೆ ಎಸ್ ಕೇಸರಿಯವರ ಹೆಸರಿನಲ್ಲಿ ಸರ್ವೆ ನಂ 98 ರಲ್ಲಿ 4 ಎಕರೆ ಇದ್ದು, ಲಕ್ಷ್ಮಿಯವರ ಹೆಸರಿನಲ್ಲಿ ಸರ್ವೆ ನಂ 97 ರಲ್ಲಿ 4 ಎಕರೆ ಇತ್ತು. ಸದರಿ 2 ಜಮೀನುಗಳನ್ನು ಒಂದೇ ದಿನ ಕ್ರಯಕ್ಕೆ ಕೊಂಡಿರುತ್ತೇನೆ. ಯಾವುದೇ ಆಸ್ತಿಯನ್ನು ಖರೀದಿಸಬೇಕಾದರೆ ಸರ್ವೆ ಸ್ಕೇಚ್, ಖಾತೆ, ಖಾತೆದಾರರು, ಪಹಣಿ ಬೇಕು ಎಂದರೆ ಸರಿ. ನಾನು ದಾವಾಸ್ತಿಯನ್ನು ಖರೀದಿಸುವ ಕಾಲಕ್ಕೆ ಯಾವುದೇ ಸರ್ವೆ ನಕಾಶೆ ಮಾಡಿಸಿರುವುದಿಲ್ಲ. 1986 ರಲ್ಲಿ ಆದ ಕ್ರಯಪತ್ರದಲ್ಲಿ ಉಲ್ಲೇಖಿಸಿರುವ ಚೆಕ್ಕುಬಂದಿಯನ್ನು ನಾನು ಮಾರಾಟಗಾರರು ಕೊಟ್ಟ ಪಹಣಿ, ಮ್ಯೂಟೇಶನ್ ಆಧಾರದ ಮೇಲೆ ಬರೆಸಿರುತ್ತೇನೆ. ತದ ನಂತರ ಸರ್ವೆ ನಂ 97 ನ್ನು ನಾನು ನನ್ನ ಪತ್ನಿಗೆ ನಿಪಿ-4 ರಂತೆ ನೊಂದಾಯಿತ ದಾನಪತ್ರ ಮಾಡಿಕೊಟ್ಟಿರುತ್ತೇನೆ. ಸದರಿ ನಿಪಿ-4 ರಲ್ಲಿ ಉಲ್ಲೇಖಿಸಿರುವ ಚೆಕ್ಕುಬಂದಿಯನ್ನು ಪಹಣಿ, ಮ್ಯೂಟೇಶನ್, ನಕಾಶೆ, ಮತ್ತು ಅಕ್ಕಪಕ್ಕದ ಸರ್ವೆ ನಂಬರುಗಳ ಆಧಾರದ ಮೇಲೆ ಬರೆಸಿರುತ್ತೇನೆ. ನಾನು ನನ್ನ ಪತ್ನಿಯೊಂದಿಗೆ ವಾಸವಾಗಿದ್ದೇನೆ.

ನಾನು ಈ ದಾವೆಯನ್ನು 2017 ರಲ್ಲಿ ಹೂಡಿದ್ದೆನೆ. ನಿಪಿ-5 ರಂತೆ ತಿದ್ದುಪಡಿ ಪತ್ರವನ್ನು ನಾನೇ ಹೇಳಿ ಮಾಡಿಸಿರುತ್ತೇನೆ. ನ್ಯಾಯಾಲಯದಲ್ಲಿ ಈ ದಾವೆ ಹೂಡಿದ ನಂತರ ಸದರಿ ದಾವೆಯ ದಾವಾಸ್ತಿಗಳ ಚೆಕ್ಕುಬಂದಿಗಳಿಗೆ ಹೊಂದಿಕೊಳ್ಳುವಂತೆ ನಿಪಿ-5 ರಂತೆ ತಿದ್ದುಪಡಿ ಪತ್ರವನ್ನು ಮಾಡಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾವಾಸ್ತಿಯ ಉತ್ತರ ದಕ್ಷಿಣದ ಚೆಕ್ಕುಬಂದಿಗಳು ಅದಲು ಬದಲಾದ್ದರಿಂದ

ನಿಪಿ-5 ರಂತೆ ತಿದ್ದುಪಡಿ ಪತ್ರ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ನಿಪಿ-5 ರ ಪತ್ರವನ್ನು ನಾನು ನಿಪಿ-4 ರಲ್ಲಿ ಉಲ್ಲೇಖಿಸಿರುವ ಚೆಕ್ಕುಬಂದಿಗಳು ತಪ್ಪಾಗಿದೆ ಎಂದು ನಿಪಿ-5 ರಂತೆ ಮಾಡಿಸಿರುತ್ತೇನೆ. ನಿಪಿ-5 ರ ತಿದ್ದುಪಡಿ ಪತ್ರಕ್ಕೆ ಮಾರಾಟಗಾರರಾಗಲಿ, ಸಾಕ್ಷಿದಾರರಾಗಲಿ, ಸಹಿ ಮಾಡಿಲ್ಲ ಎಂದರೆ ಸಾಕ್ಷಿ ನನ್ನ ಆಸ್ತಿಗೆ ನಾನು ಸಹಿ ಮಾಡಿದ್ದೆನೆ ಎಂದು ನುಡಿಯುತ್ತಾರೆ. ದಾ ವಾಸ್ತಿಯಲ್ಲಿ ನಮೂದಿಸಿರುವ ಚೆಕ್ಕುಬಂದಿಗಳನ್ನು ತೋರಿಸಲು ನಾನು ಕಂದಾಯ ಇಲಾಖೆಯ ಟಿಪ್ಪಣಿ , ನಕಾಶೆ, ರಿಜಿಸ್ಟರ್ ಪತ್ರ, ತಿದ್ದುಪಡಿ ಪತ್ರ ದಾಖಲೆಗಳನ್ನುಹಾಜರುಪಡಿಸಿರುತ್ತೇನೆ. 1986 ರ ಪೂರ್ವದಲ್ಲಿ ದಾವಾಸ್ತಿಯ ಚೆಕ್ಕುಬಂದಿಗಳನ್ನು ತೋರಿಸಲು ಮ್ಯೂಟೇಶನ್ ಮತ್ತು ಪಹಣಿಯನ್ನು ಹಾಜರುಪಡಿಸಿರುತ್ತೇನೆ.

(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.